ಅದೊಂದು ದಿನ ಹೊಲಿದಿದ್ದ ಬಟ್ಟೆಗಳನ್ನು ಪ್ಯಾಕ್ ಮಾಡಿಕೊಂಡು ಅದನ್ನು ಅಂಗಡಿಗೆ ಕೊಟ್ಟು ಅವರು ಕೊಟ್ಟ ಹಣವನ್ನು ತೆಗೆದುಕೊಂಡು ವರ್ಷ ಹೊರ ನಡೆಯಬೇಕೆನ್ನುವಷ್ಟರಲ್ಲಿ ವೀರೂ ಅಂತ ಕೂಗಿದಂತಾಗಿ ಎದೆ ಝಲ್ಲೆನಿಸಿ ಅರೆಕ್ಷಣ ನಿಂತುಬಿಟ್ಟಳು. ತಕ್ಷಣವೇ ಸಾವರಿಸಿಕೊಂಡು ಹಾಗೆ ಕರೆಯುವವರಾರು ಈ ಊರಿನಲ್ಲಿ? ಅದು ಮುಗಿದು ಹೋಗಿರುವ ಕಥೆಯ ಪಾತ್ರದ ಹೆಸರು ಅಂದುಕೊಂಡು ನಡೆಯತೊಡಗಿದಳು. ಇನ್ನೇನು ಆಟೊ ಹತ್ತ ಬೇಕು ಅನ್ನುವಷ್ಟರಲ್ಲಿ ಹಿಂದಿನಿಂದ ಯಾರೋ ಹಿಡಿದು ಎಳೆದಂತಾಗಿ ತಿರುಗಿ ನೋಡಿದರೆ ಮೇನಕ ಹನಿಗಣ್ಣಾಗಿ ನಿಂತಿದ್ದಾಳೆ. ಆಘಾತಕ್ಕೊಳಗಾದ ವರ್ಷ ಶಿಲೆಯಂತೆ ನಿಂತು ಬಿಟ್ಟಳು.

'ವೀರು ನೀನು ಬದುಕಿದ್ದೀಯಾ, ನಂಗೆ ನಂಬೋಕೆ ಆಗ್ತಾ ಇಲ್ಲ. ಅದೆಷ್ಟು ವರ್ಷ ಆಯ್ತು ನಿನ್ನ ನೋಡಿ, ನೀನು ಸತ್ತಿದ್ದೀಯಾ ಅಂತಲೇ ಎಲ್ಲರೂ ಅಂದು ಕೊಂಡಿದ್ದಾರೆ ಕಣೊ ವೀರು, ನಿನ್ನ ಇಲ್ಲಿ ನೋಡ್ತೀನಿ ಅಂತ ಅಂದುಕೊಂಡಿರಲಿಲ್ಲ' ಗಟ್ಟಿಯಾಗಿ ಅವಳನ್ನು ಹಿಡಿದುಕೊಂಡು ಉದ್ವೇಗದಿಂದ ನುಡಿದಳು. 'ವೀರೂ, ವೀರೂ ನೀನು ಬದುಕಿದ್ದಿಯಾ, ಅಪ್ಪ, ಅಮ್ಮ, ಚಿಕ್ಕಪ್ಪ ನಿನ್ನ ನೆನೆಸಿಕೊಂಡು ಸದಾ ಅಳ್ತಾ ಇರ್ತಾರೆ ಕಣೊ, ಯಾಕೊ ಹೀಗೆ ಮಾಡಿಬಿಟ್ಟೆ, ನಮ್ಮ ನೆನಪು ನಿನಗೆ ಆಗಲೇ ಇಲ್ಲವೇನೊ' ವರ್ಷಳನ್ನು ತಬ್ಬಿಕೊಂಡು ಗೋಳೊ ಅಂತ ಅತ್ತೇ ಬಿಟ್ಟಳು. ಅವಳಿಂದ ಬಿಡಿಸಿಕೊಳ್ಳುತ್ತಾ 'ಯಾರು ನೀವು, ನಾನು ವರ್ಷ, ನೀವು ತಪ್ಪು ತಿಳ್ಕೊಂಡಿದ್ದೀರಿ, ಬಿಡಿ ನನ್ನ, ನಾನು ಹೋಗಬೇಕು' ಅಂತ ಅವಳಿಂದ ಬಿಡಿಸಿಕೊಳ್ಳುವ ಪ್ರಯತ್ನ ನಡೆಸಿದಳು. 'ಅಯ್ಯೋ ವೀರೂ, ನಿನಗೆ ಇಷ್ಟ ಅಂತ ಇದೇ ಕೈಯಲ್ಲಿ ಹುಡುಗಿ ಡ್ರೆಸ್ ಹಾಕಿ ಚಿಕ್ಕಮ್ಮನತ್ರ ಬೈಸಿಕೊಳ್ತಾ ಇದ್ದೆನಲ್ಲೋ, ಯಾರನ್ನೋ ನೋಡಿ ವೀರು ಅಂತ ಕರೀತಾ ಇಲ್ಲ, ನೀನು ಯಾವ ವೇಷದಲ್ಲಿ ಇದ್ದರೂ ನನ್ನ ಹೃದಯಕ್ಕೆ ಗೊತ್ತಾಗುತ್ತೆ ಕಣೊ, ನನ್ನ ಮುದ್ದಿನ ತಮ್ಮ ಅಲ್ಲವೇನೊ ನೀನು, ನನ್ನ ಮರೆತೇಬಿಟ್ಟೆಯಾ, ನಾನು ಕಣೊ, ನಿನ್ನ ಮೇನಕಕ್ಕ' ಬಿಕ್ಕಳಿಸುತ್ತ ಹೇಳುತ್ತಿದ್ದರೆ ತಡೆಯಲಾಗಲಿಲ್ಲ ವರ್ಷಳಿಗೆ.

'ಅಕ್ಕ, ಅಕ್ಕಯ್ಯ, ಅಳಬೇಡ ಕಣೆ, ನೀನು ಅತ್ತರೆ ನಂಗೆ ತಡೆಯೋಕೆ ಆಗಲ್ಲ. ಇನ್ನೆಲ್ಲಿ ವೀರು, ಅವನು ಸತ್ತು ಹೋಗಿದ್ದಾನೆ ಕಣೆ, ಅಪ್ಪ ಅಮ್ಮನಿಗೆ ನೋವು ಕೊಟ್ಟ, ಅಮ್ಮನ ಆಸೆ, ಕನಸು ಕೊಂದು, ಕೊನೆಗೆ ಅಮ್ಮನನ್ನೂ ಕೊಂದ ಆ ವೀರೂ ಸತ್ತು ಹೋಗಿದ್ದಾನೆ, ನಿನ್ನ ಮುಂದೆ ಈಗ ಇರೋದು ಹೊಸ ಜನ್ಮ ತಳೆದಿರೋ ವರ್ಷ, ಬದುಕಿಗಾಗಿ ಹೋರಾಟ ಮಾಡ್ತಾ ಇರೋ ವರ್ಷ, ನನ್ನಂಥವರ ಸ್ವಾಭಿಮಾನಿ, ಸ್ವಾವಲಂಬಿ ಬದುಕಿಗಾಗಿ ಕಷ್ಟಪಡ್ತಿರೋ ವರ್ಷ ಮಾತ್ರ. ನನ್ನ ಪೂರ್ವಜನ್ಮದ ಯಾವ ನೆನಪೂ ನನಗೆ ಬೇಡ ಅಂತ ಎಲ್ಲರನ್ನು ಮರೆತು ಬದುಕುತ್ತಾ ಇದ್ದೇ ಅಕ್ಕಯ್ಯ. ಆ ಹಳೆಯ ವೀರುನ ನೆನೆಸಿಕೊಂಡು ಅಳಬೇಡ ಅಕ್ಕಯ್ಯ, ನನ್ನ ನನ್ನ ಪಾಡಿಗೆ ಬಿಟ್ಟು ಬಿಡು, ನಾನು ಹೀಗಿದ್ದೇನೆ, ಹೇಗೇಗೋ ಬದುಕುತ್ತಾ ಇದ್ದೇನೆ ಅಂತ ಮನೆಯಲ್ಲಿ ಯಾರಿಗೂ ತಿಳಿಯೋದು ಬೇಡ, ಸತ್ತು ಹೋಗಿದ್ದೇನೆ ಅಂತ ಎದೆ ಕಲ್ಲು ಮಾಡಿಕೊಂಡು ಇರೋ ಅಪ್ಪನಿಗೆ, ದೊಡ್ಡಪ್ಪ, ದೊಡ್ಡಮ್ಮನಿಗೆ, ಅಕ್ಕಂದಿರಿಗೆ ಗೊತ್ತಾಗೋದೇ ಬೇಡ, ಈಗ ಹೊರಡು ಅಕ್ಕಯ್ಯ, ನಾನು ಹೋಗಬೇಕು, ಬಿಟ್ಟು ಬಿಡು ನನ್ನ ಅಕ್ಕಯ್ಯ, ನಾನು ಸಿಕ್ಕಿದ್ದನ್ನು ಯಾರಿಗೂ ಹೇಳಬೇಡ, ನಿನ್ನ ದಮ್ಮಯ್ಯ ಕಣೆ'.

ಮೇನಕ ಅವಳನ್ನು ಬಿಡಲು ಸಿದ್ಧವಿರಲಿಲ್ಲ, ಕಳೆದು ಹೋದ ಅಮೂಲ್ಯ ನಿಧಿ ಸಿಕ್ಕಿರುವಂತೆ ಅವಳನ್ನು ಹಿಡಿದುಕೊಂಡೇ ಇದ್ದಾಳೆ. 'ವೀರು ಇಷ್ಟು ದಿನ ಎಲ್ಲಿದ್ದೆ, ಹೇಗಿದ್ದೆ, ನಮ್ಮ ನೆನಪು ನಿಂಗೆ ಕಾಡಲೇ ಇಲ್ಲವೇ' ದುಃಖದಲ್ಲಿ ಕೇಳಿದಳು. 'ಅಯ್ಯೋ ಅಕ್ಕಯ್ಯಾ, ಪ್ರತಿದಿನ, ಪ್ರತಿಕ್ಷಣ ಅಪ್ಪ, ದೊಡ್ಡಮ್ಮ, ದೊಡ್ಡಪ್ಪ, ಅಕ್ಕಂದಿರ, ಊರು ಎಲ್ಲ ನೆನೆಸಿಕೊಂಡು ಅಳ್ತಾ ಇದ್ದೆ, ಆ ದೇವರು ನಂಗೇ ಯಾಕೆ ಹೀಗೆ ಮಾಡಿ ಬಿಟ್ಟ, ನಾನು ಹೀಗಾಗಿದ್ದಕ್ಕೆ ಅಲ್ವಾ ಅಮ್ಮ ನನ್ನ ಬಿಟ್ಟು ಹೋಗಿದ್ದು, ನಾನು ಇನ್ನೂ ಅಲ್ಲೇ ಇದ್ದರೆ ಅಪ್ಪನೂ ಹೋಗಿಬಿಡ್ತಾರೆ ಅನ್ನೋ ಭಯ, ನನ್ನಿಂದ ಅಕ್ಕಂದಿರಿಗೂ ತೊಂದರೆ ಅಂತ ಸತ್ತು ಹೋಗಬೇಕು ಅಂತ ಹೊಳೆಗೆ ಬಿದ್ದೆ. ಆದರೆ ನನ್ನ ಆಯುಷ್ಯ ಇನ್ನೂ ಗಟ್ಟಿಯಾಗಿತ್ತು, ನನ್ನಂಥವಳೇ ಆದ ಒಬ್ಬ ಮಂಗಳಮುಖಿ ಅಮ್ಮ ಸಿಕ್ಕಿದಳು, ನನ್ನನ್ನು ಸಾಕಿ ಸಲಹಿ ಬದುಕೋ ಧೈರ್ಯ ತುಂಬಿದಳು. ಅವಳು ಸತ್ತ ಮೇಲೆ ಇಲ್ಲಿಗೆ ಬಂದು ಸ್ವಾವಲಂಬಿಯಾಗಿ ಬದುಕಲು ಹೋರಾಟ ಮಾಡುತ್ತಿದ್ದೇನೆ. ಹೇಗೊ ಬದುಕುತ್ತೇನೆ, ನನ್ನ ಬಿಟ್ಟು ಬಿಡು' ಎಂದು ವ್ಯಥೆ ತುಂಬಿಕೊಂಡು ಹೇಳಿದಳು.

'ಇಲ್ಲ, ವೀರೂ, ನಿನ್ನ ಬಿಡಲಾರೆ, ಈಗ ನಮ್ಮ ಮನೆಗೆ ಹೋಗೋಣ ಮೊದಲು, ನಾನು ಈಗ ಇಲ್ಲಿಯೇ ಇದ್ದೇನೆ, ಆಮೇಲೆ ನಿನ್ನ ಕಥೆ, ವ್ಯಥೆ ಎಲ್ಲಾ ಕೇಳ್ತೀನಿ. ಬಾ ಅಂತ ಎಳೆದುಕೊಂಡೇ ಹೊರಟಳು. 'ಅಕ್ಕ, ಅಕ್ಕಯ್ಯ, ನನ್ನ ಮಾತು ಕೇಳು ಸ್ವಲ್ಪ, ಹಂಗೆಲ್ಲ ನಿನ್ನ ಮನೆಗೆ ಹೋದ್ರೆ ನಿನ್ನ ಮನೆಯವರು ಏನು ಅಂದುಕೊಳ್ಳುತ್ತಾರೆ. ನಾನು ಮೊದಲಿನ ವೀರೂಅಲ್ಲ, ಈ ಸಮಾಜ ಅಸಹ್ಯದಿಂದ, ಜಿಗುಪ್ಸೆಯಿಂದ ನೋಡೊ ಮಂಗಳಮುಖಿ ನಾನು, ಗಂಡು ದೇಹದ ಹೆಣ್ಣು ಮನಸ್ಸಿನ ಶಾಪಗ್ರಸ್ಥ ವರ್ಷ ಇವಳು, ನನ್ನಂಥವಳನ್ನು ನಿನ್ನ ಮನೆಗೆ ಕರೆದುಕೊಂಡು ಹೋಗಿ ತಮ್ಮ ಅಂತ ಹೇಳ್ತಿಯಾ, ತಮ್ಮನಾಗಿ ಹುಟ್ಟಿ, ಈಗ ತಂಗಿ ಆಗಿ ಬದಲಾಗಿದ್ದಾಳೆ ಅಂತ ಪರಿಚಯಿಸುತ್ತೀಯಾ, ಏನಂತ ಹೇಳ್ತೀಯಾ, ಕರೆದು ಕೊಂಡು ಹೋಗೊ ಧೈರ್ಯ ಇದೆಯಾ ಅಕ್ಕಯ್ಯ' ವರ್ಷಳ ಮಾತು ಕೇಳಿ ಕ್ಷಣ ಸುಮ್ಮನೆ ನಿಂತು ಬಿಟ್ಟಳು ಮೇನಕ. ಹೌದಲ್ಲವೇ, ತಾನು ಈ ಹುಡುಗಿಯಂತೆ ವೇಷ ಧರಿಸಿರುವ ಇವನನ್ನು, ತನ್ನ ಪ್ರೀತಿಯ ತಮ್ಮ ವೀರೂ ಅಂತ ಹೇಳಿಕೊಳ್ಳುವ ಯಾವ ಕುರುಹೂ ಇಲ್ಲದ ಇವನನ್ನು ಮನೆಗೆ ಕರೆದುಕೊಂಡು ಹೋಗಿ ಅವರ ತಿರಸ್ಕಾರಕ್ಕೆ ತಮ್ಮನನ್ನು ಒಳಪಡಿಸಲೇ, ವೀರೂ ಸಿಕ್ಕಿದ ಅನ್ನೋ ಸಂತಸದಲ್ಲಿ, ಅವನನ್ನು ಕಂಡ ಭಾವೋದ್ವೇಗದಲ್ಲಿ ಅದೆಲ್ಲ ಹೊಳೆಯಲೇ ಇಲ್ಲ. ಆದರೂ ಅವನನ್ನು ಮತ್ತೆ ಕಳೆದುಕೊಳ್ಳಬಾರದು, ಇಂತಹ ತಿರಸ್ಕಾರಗಳು ಅವನಿಗೆ ಅದೆಷ್ಟು ಆಗಿದ್ದಾವೊ, ನನ್ನ ಮನೆಯಲ್ಲಿಯೂ ಆಗಿಬಿಡಲಿ, ಅದನ್ನು ಎದುರಿಸುವ ಮನೋಸ್ಥೈರ್ಯ ವೀರೂಗೆ ಇದ್ದೇ ಇರುತ್ತದೆ. ಮನೆಯಲ್ಲಿ ಅದು ಏನಾಗುತ್ತದೆಯೋ ನೋಡಿಯೇ ಬಿಡೋಣ ಅಂತ ಆ ಗಳಿಗೆಯಲ್ಲಿಯೇ ನಿರ್ಧರಿಸಿಕೊಂಡು 'ವೀರೂ ಯಾರು ಏನೂ ಹೇಳಿದರೂ, ಹೇಗೆ ಕಂಡರೂ ನೀನು ನನ್ನ ಪ್ರೀತಿಯ ತಮ್ಮನೇ, ಅದು ಬದಲಾಗದು, ಈಗ ಹೆಣ್ಣಿನ ವೇಷ ಧರಿಸಿ ಬದಲಾಗಿದ್ದೀಯಾ, ಹಾಗೆ ಹೇಳುತ್ತೇನೆ, ಬಾ ಮನೆಗೆ ಹೋಗೋಣ. ನಿನ್ನ ಹತ್ತಿರ ತುಂಬಾ ತುಂಬಾ ಮಾತಾಡಬೇಕು' ಅಂತ ಹೇಳಿ ವರ್ಷಳಿಗೆ ಮುಂದೆ ಮಾತನಾಡಲು ಅವಕಾಶ ಕೊಡಲಿಲ್ಲ. ಅವನನ್ನು ಎಳೆದುಕೊಂಡೇ ತಾನು ಕಾರು ಪಾರ್ಕ್ ಮಾಡಿದ ಕಡೆ ಬಂದು ಕಾರಿನ ಬಾಗಿಲು ತೆರೆದು ಬಲವಂತವಾಗಿ ಒಳಗೆ ಕೂರಿಸಿ ತಾನು ಕುಳಿತುಕೊಂಡು ಕಾರು ಸ್ಟಾರ್ಟ್ ಮಾಡಿದಳು.

ಅವಳನ್ನೇ ಬೆರಗಿನಿಂದ ನೋಡುತ್ತಾ, 'ಅಕ್ಕಯ್ಯಾ, ನೀನು ಕಾರು ಓಡಿಸ್ತೀಯಾ, ನಿನ್ನನ್ನು ಹೀಗೆ ನೋಡಿ ನಂಗೆ ಎಷ್ಟು ಖುಷಿಯಾಗ್ತಾ ಇದೆ ಗೊತ್ತಾ, ಬಾವ ಹೇಗಿದ್ದಾರೆ, ಅವರಿಗೆ ನನ್ನ ವಿಷಯ ಗೊತ್ತಾ? ನಂಗ್ಯಾಕೊ ನಾನು ನಿಮ್ಮ ಮನೆಗೆ ಬರೋದು ಸರಿ ಅನ್ನಿಸ್ತಾ ಇಲ್ಲ, ನನ್ನ ಮಾತು ಕೇಳು ಅಕ್ಕಯ್ಯಾ, ನೀನು ಹೋಗಿ ಬಾವನಿಗೆ ನನ್ನ ವಿಷಯ ಹೇಳು, ಅವರು ಒಪ್ಪಿದರೆ ಇನ್ನೊಂದು ದಿನ ಬರುತ್ತೇನೆ, ಈಗ ನಮ್ಮ ಅಂಗಡಿಗೆ ಹೋಗೋಣ ಬಾ, ನನ್ನಂಥವರೇ ಸೇರಿಕೊಂಡು ಹೇಗೆ ಬದುಕುತ್ತಾ ಇದ್ದೀವಿ ಅಂತ ನೋಡು, ಆಗ ನೀನೇ ನಿನ್ನ ಈ ತಂಗಿ ಬಗ್ಗೆ ಹೆಮ್ಮೆ ಪಡುತ್ತೀಯಾ. ಪ್ಲೀಸ್ ಅಕ್ಕಯ್ಯ ಹೋಗೋಣ' ಅಂತ ಅಂಗಲಾಚಿ ಬೇಡಿಕೊಂಡ. ವೀರು ಹೇಳ್ತಾ ಇರೋದು ಸರಿ ಅನ್ನಿಸಿತು. ನಮ್ಮ ಮನೆಗೆ ಕರೆದುಕೊಂಡು ಹೋಗಿ ಅವನಿಗೆ ಮುಜುಗರ ಮಾಡೋದಕ್ಕಿಂತ, ಅವನು ವಾಸ ಮಾಡ್ತ ಇರೋ ಜಾಗ ತಿಳಿದುಕೊಂಡರೆ ಅಪ್ಪ ಅಮ್ಮ ಚಿಕ್ಕಪ್ಪ ತಂಗಿಯರು ಎಲ್ಲರನ್ನೂ ಅಲ್ಲಿಗೆ ಕರೆದುಕೊಂಡು ಹೋಗಬಹುದು, ಅವನು ನಮ್ಮ ಮನೆಗೆ ಬಂದು ಹಾಗೆ ಹೋಗಿಬಿಟ್ಟರೆ, ಮತ್ತೆ ಅವನು ಸಿಗುತ್ತಾನೊ ಇಲ್ಲವೊ ಅಂತ ಯೋಚನೆ ಮಾಡಿ 'ಆಯ್ತು ವೀರು, ಇವತ್ತು ನೀನಿರೋ ಜಾಗಕ್ಕೆ ಹೋಗೋಣ, ಅಡ್ರೆಸ್ ಹೇಳು' ಅಂತ ಹೇಳಿ ಆ ವಿಳಾಸದತ್ತ ಕಾರು ತಿರುಗಿಸಿದಳು. ಕಾರು ಓಡಿಸುತ್ತಲೇ 'ವೀರೂ, ಇಷ್ಟು ವರ್ಷ ಎಲ್ಲಿದ್ದೆ, ಹೇಗಿದ್ದೆ. ನಾವ್ಯಾರೂ ನಿನಗೆ ನೆನಪಿಗೆ ಬರುತ್ತಿರಲಿಲ್ಲವೇ' ಅಂದಾಗ ವರ್ಷ ಜೋರಾಗಿ ಅತ್ತಳು. 'ಥೂ ಇದೇನೊ ಹುಡುಗಿ ಥರಾ ಅಳ್ತಾ ಇದ್ದೀಯಾ, ಅಯ್ಯೋ ನೀನು ಈಗ ಹುಡುಗಿಯ ಥರನೇ ಅಲ್ವಾ? ಸಮಾಧಾನ ಮಾಡಿಕೊ, ಊರಲ್ಲಿಯೇ ಇದ್ದು ಧೈರ್ಯವಾಗಿ ಬದುಕೋದು ಕಷ್ಟ ಅಂತ ಮನೆ ಬಿಟ್ಟು ಹೋದೆಯಾ ವೀರೂ? ಅಷ್ಟರಲ್ಲಿ ತನ್ನ ದುಃಖವನ್ನು ತಹಬದಿಗೆ ತಂದುಕೊಂಡ ವರ್ಷ ತಾನು ಸಾಯಲೆಂದೇ ಹೊಳೆಗೆ ಹಾರಿದ್ದು, ನೀರಿನ ಸೆಳೆತ ತನ್ನನ್ನು ಕೊಲ್ಲದೆ ದೂರದಲ್ಲೆಲ್ಲೋ ದಡಕೆ ಹಾಕಿದ್ದು, ಅಲ್ಲಿ ಅಮ್ಮನ ಮನಸ್ಸಿನ ನನ್ನಂಥದ್ದೇ ಜೀವದ ಅಂತಃಕರಣದಿಂದ ಅವಳ ಮಗಳಾಗಿ ಪುನರ್ಜನ್ಮ ಪಡೆದು ಹೊಸ ಬದುಕು ಆರಂಭಿಸಿದ್ದು,